
8 ಜನವರಿ 1995 ಬೆಲೆ ರೂ. 4.50

# ಸುಧಾ

**1994**
ಮುಗಿದ ವರ್ಷದ
ಹಿನ್ನೋಟ



## ಕಲಾನ್ವೇಷಕ ಕೆ.ಕೆ.ಹೆಬ್ಬಾರ್




# ದೇವೇಗೌಡ

## ಮುಖ್ಯಮಂತ್ರಿಯಾದ ಮಣ್ಣಿನ ಮಗ

## 1994 ಸಿಂಹಾವಲೋಕನ

ರಾಜ್ಯ ಜೋತೆ



ಮತ್ತೆ ಅಧಿಕಾರಕ್ಕೆ ಜನತಾ ದಳ


# ಕಾಂಗ್ರೆ ಉಚ್ಚಾಟನೆ— ಅಗಲಿಕೆಯ ನೋವಿನೊಂದಿಗೆ

■ ಕೆ. ಶ್ರೀಧರ ಆಚಾರ್

**ಹೊಸ ವರ್ಷದ ಉದಯದಲ್ಲಿ ಒಂದು ಹಿನ್ನೋಟ ಹರಿಸಿದಾಗ ಕಾಣುವ 1994ರ ಕರ್ನಾಟಕದ ಚಿತ್ರ ಹಿತಕರವಾದುದೇನಲ್ಲ. ಹಲವಾರು ರಾಜಕೀಯ ಸ್ಥಿತ್ಯಂತರಗಳನ್ನು ಕಂಡ ಕರ್ನಾಟಕ ವರ್ಷಾಂತ್ಯದಲ್ಲಿ ಅಚ್ಚರಿಯನ್ನು ಕಂಡಿತು. ಕಾಂಗ್ರೆ ಕಚ್ಚಾಟ, ದುರಾಡಳಿತದಿಂದ ಬೇಸತ್ತ ಮತದಾರ ಆ ಪಕ್ಷವನ್ನು ತಿರಸ್ಕರಿಸಿ ಜನತಾದಳದಲ್ಲಿ ವಿಶ್ವಾಸ ತೋರಿದ. ಜೊತೆಗೆ ಈದ್ಗಾ ವಿವಾದ, ಉರ್ದು ವಿವಾದಗಳು ಹಲವಾರು ಅಮಾಯಕ ಜನರ ಪ್ರಾಣವನ್ನು ತೆಗೆದುಕೊಂಡು ಮಾನವೀಯ ಅಂತಃಕರಣ ನೊಂದಿತು.**



ಅಗಲಿದ ಸಾಹಿತಿ ಸಿದ್ಧಯ್ಯ ಪುರಾಣಿಕ



ಚಿರನಿದ್ರೆಯಲ್ಲಿ ಕುವೆಂಪು

ರಾಜಕೀಯ ಸ್ಥಿತ್ಯಂತರದೊಂದಿಗೆ ಕರ್ನಾಟಕ ಹೊಸ ವರ್ಷ (1995)ಕ್ಕೆ ಕಾಲಿರಿಸಿದೆ. ಐದು ವರ್ಷಗಳ ಹಿಂದೆ (1989) ತಾನೇ ರಾಜಕೀಯ ವನವಾಸಕ್ಕೆ ಕಳುಹಿಸಿದ್ದ ಜನತಾದಳವನ್ನು ರಾಜ್ಯದ ಪ್ರಜ್ಞಾವಂತ ಮತದಾರ ಇದೀಗ ಮರಳಿ ಅಧಿಕಾರದ ಪಟ್ಟ ಏರುವಂತೆ ಮಾಡಿದ್ದಾನೆ.

1995ನೇ ಇಸವಿಗೆ ಕಾಲಿರಿಸಿ, 1994ನೇ ವರ್ಷದ ಸಿಂಹಾವಲೋಕನ ಮಾಡಿದಾಗ, ಕರ್ನಾಟಕದ ರಾಜಕೀಯ ಕ್ಷೇತ್ರದಲ್ಲಿನ ತಳಮಳ. ಅಷ್ಟೇ ಅಲ್ಲ, ಸಾಮಾಜಿಕ ಜೀವನದಲ್ಲಿ ಅಶಾಂತಿ, ಸಾಹಿತ್ಯ– ಸಾಂಸ್ಕೃತಿಕ ಕ್ಷೇತ್ರದಲ್ಲಿ ಹಿರಿಯ ಸಾಹಿತಿಗಳ ನಿರ್ಗಮನ, ಪ್ರಶಸ್ತಿ, ಪುರಸ್ಕಾರಗಳು, ನೈಸರ್ಗಿಕ ವಿಕೋಪಗಳು ಗೋಚರಿಸುತ್ತವೆ.

ಕಳೆದ ವಿಧಾನಸಭಾ ಚುನಾವಣೆಯಲ್ಲಿ (1989) ಅತ್ಯಧಿಕ ಬಹುಮತದೊಂದಿಗೆ ರಾಜ್ಯದಲ್ಲಿ ಕಾಂಗ್ರೆಸ್(ಐ) ಪಕ್ಷ ಅಧಿಕಾರಕ್ಕೆ ಮರಳಿದಾಗ, ಮತದಾರರ ಮನದ ಇಂಗಿತ ಏನಿತ್ತು ಎಂಬುದು ಸ್ಪಷ್ಟವಾಗಿತ್ತು. ಜನತಾದಳದ ಕೆಲವರಲ್ಲಿ ಅಧಿಕಾರ ಲಾಲಸೆ ಹಾಗೂ ಅದರಿಂದ ಉದ್ಭವಿಸಿದ ಒಳಜಗಳ, ಕಚ್ಚಾಟದಿಂದ ಜನ ರೋಸಿ ಹೋಗಿದ್ದರು. ಅದರ ಪರಿಣಾಮವಾಗಿ ಕಾಂಗ್ರೆಸ್(ಐ)ಗೆ ಮತ್ತೊಮ್ಮೆ ಅಧಿಕಾರ ನಡೆಸುವ ಅಧಿಕಾರ ಲಭಿಸಿತ್ತು. ಆದರೆ ಅಧಿಕಾರಕ್ಕೆ ಬಂದ ಮೇಲೆ ಕಾಂಗ್ರೆಸಿಗರು ಮಾಡಿರುವುದೇನು?

ಆರಂಭದಿಂದಲೇ ಅಧಿಕಾರ ದಾಹ, ಭಿನ್ನಮತ, ಒಳಜಗಳ ಬಹಿರಂಗಗೊಂಡಿತ್ತು. ಅದರ ಬಿಸಿ ತಗುಲಿ ವೀರೇಂದ್ರ ಪಾಟೀಲರು ಒಂದು ವರ್ಷದಲ್ಲೇ ಅಧಿಕಾರ ಕಳೆದುಕೊಂಡರು. ನಂತರ ಬಂದ ಎಸ್. ಬಂಗಾರಪ್ಪ ಅವರು ಹಾಗೂ ಹೀಗೂ ಎರಡು ವರ್ಷ ಆಡಳಿತ ನಡೆಸಿ ಪದಚ್ಯುತರಾದರು. ಮೂರನೇ ಮುಖ್ಯಮಂತ್ರಿ ವೀರಪ್ಪ ಮೊಯಿಲಿ ಅವರಿಗೂ ಈ ಕಾಟ ತಪ್ಪಲಿಲ್ಲ.

1994 ಉದಯಿಸುತ್ತಿದ್ದಂತೆಯೇ ಆಡಳಿತ ಪಕ್ಷವಾದ ಕಾಂಗ್ರೆಸ್(ಐ)ನಲ್ಲಿ ಭಿನ್ನಮತ ಉಲ್ಬಣ ಸ್ಥಿತಿ ತಲುಪಿ, ಎಐಸಿಸಿ(ಐ) ವೀಕ್ಷಕರಾಗಿ ಆಗಮಿಸಿದ ಡಾ. ಜಗನ್ನಾಥ ಮಿಶ್ರಾ ಅವರು ಸುದೀರ್ಘ ಸಮಾಲೋಚನೆ ನಡೆಸಿದರು. ಡಾ. ಮಿಶ್ರಾ ಸೂಚಿಸಿದ 12 ಅಂಶಗಳ ಸೂತ್ರವನ್ನು ಒಳಗೊಂಡ 'ಚಿಕಿತ್ಸೆ' ಕಾಂಗ್ರೆಸ್ ಅನ್ನು ಪೀಡಿಸುತ್ತಿದ್ದ ವ್ಯಾಧಿಯನ್ನು ಗುಣಪಡಿಸುತ್ತದೆ ಎಂದು ಭಾವಿಸಲಾಗಿತ್ತು. ಏಕೆಂದರೆ ಆ ವೇಳೆಗಾಗಲೇ ಉಪ ಮುಖ್ಯಮಂತ್ರಿ ಎಸ್.ಎಂ. ಕೃಷ್ಣ ಅವರೂ ಸೇರಿದಂತೆ ಎಂಟು ಮಂದಿ ಸಚಿವರು ರಾಜ್ಯಪಾಲರಿಗೆ ತಮ್ಮ ರಾಜೀನಾಮೆ ಸಲ್ಲಿಸಿ, 'ಈಗ ಏನು ಮಾಡುತ್ತೀರಿ ನೋಡೋಣ' ಎಂಬಂತೆ ಹೈಕಮಾಂಡ್ ಮೇಲೆ

ಕೆಡಿಸಿದ ಪ್ರಕರಣಗಳು ಕಡಿಮೆಯೇನಿರಲಿಲ್ಲ. ಜನವರಿ 26, ಆಗಸ್ಟ್ 15 ಬಂತೆಂದರೆ ಹುಬ್ಬಳ್ಳಿ–ಧಾರವಾಡ ಅವಳಿ ನಗರದ ಜನರ ನೆಮ್ಮದಿ ಭಂಗ ಖಚಿತ ಎಂಬಂತಾಗಿದೆ. ಇದು 1992 ಆಗಸ್ಟ್ 15 ರಂದು ಆರಂಭವಾದ ಸರಣಿ ಕತೆ.

ಈ ಬಾರಿಯೂ ಜನವರಿ 26 ರಂದು ಹುಬ್ಬಳ್ಳಿಯ ವಿವಾದಿತ ಮೈದಾನದಲ್ಲಿ ರಾಷ್ಟ್ರ ಧ್ವಜಾರೋಹಣ ಮಾಡುವ ಸಂಕಲ್ಪವನ್ನು ಬಿಜೆಪಿ ಮತ್ತು ಅದರ ಸಹಚರ ಸಂಘಟನೆಗಳು ಘೋಷಿಸಿದುವು. ಆದರೆ ಅಲ್ಲಿ ಅದಕ್ಕೆ ಅವಕಾಶವಿಲ್ಲ ಎಂದು ಸರ್ಕಾರ ನಿಷೇಧಾಜ್ಞೆ, ಪೊಲೀಸ್ ಬಂದೋಬಸ್ತ್ ವ್ಯವಸ್ಥೆ ಮಾಡಿತು. ಧ್ವಜಾರೋಹಣಕ್ಕೆ ನುಗ್ಗಿದ ಜನರನ್ನು ಬಂಧಿಸುವ ಮುನ್ನ, ಲಾಠಿಪ್ರಹಾರ, ಅಶ್ರುವಾಯು ಪ್ರಯೋಗ ಎಲ್ಲ ನಡೆದುವು.

ಜನವರಿ 26 ರಂದು ಆಗಲಿಲ್ಲ ಎಂದು ಆಗಸ್ಟ್ 15 ರಂದು ಸುಮ್ಮನಿರಲಾದೀತೆ? ಸರಿ, ಮತ್ತೆ ಅದೇ ಘೋಷಣೆ, ಬಂದೋಬಸ್ತ್ ಇತ್ಯಾದಿ. ಆದರೆ ಈ ಬಾರಿ ವಿಧಾನಸಭಾ ಚುನಾವಣೆ ಸಮೀಪಿಸುತ್ತಿದ್ದ ಕಾರಣ ಉಭಯ ಬಣಗಳಿಗೂ ಪ್ರತಿಷ್ಠೆಯ ಪ್ರಶ್ನೆಯಾಗಿತ್ತು. ಆದುದರಿಂದಲೇ ಹೆಚ್ಚು ದೃಢ ನಿರ್ಧಾರ. ಬಿಜೆಪಿಯ ರಾಷ್ಟ್ರ ನಾಯಕರೂ ಆಗಮಿಸಿದರು. ಹುಬ್ಬಳ್ಳಿಯಲ್ಲಿ ಕರ್ಫ್ಯೂ ವಿಧಿಸಲಾಯಿತು. ಇಷ್ಟೆಲ್ಲ ಆದ ಮೇಲೆ ಶಾಂತಿಭಂಗ ಆಗದೆ ಇರಲು ಸಾಧ್ಯವೇ? ಧ್ವಜಾರೋಹಣಕ್ಕೆ ಮುನ್ನುಗ್ಗಿದಾಗ ಘರ್ಷಣೆ, ಗೋಲಿಬಾರ್ ನಡೆದು 5 ಮಂದಿ ಸತ್ತರು. ಹುಬ್ಬಳ್ಳಿ–ಧಾರವಾಡ ಜನ ತತ್ತರಿಸಿದರು. ಎರಡೂ ಕಡೆಗಳ ಹಠಮಾರಿ ನಿಲುವು ಜನರಲ್ಲಿ ಬೇಸರ ಹುಟ್ಟಿಸಿತು.

## ಬೆಂಗಳೂರಿನ ಸರದಿ

ಅಕ್ಟೋಬರ್ ತಿಂಗಳಲ್ಲಿ ನೆಮ್ಮದಿ ಕೆಡುವ ಸರದಿ, ಬೆಂಗಳೂರಿನ ಜನತೆಯದು. ಗಾಂಧಿ ಜಯಂತಿ ದಿನ (ಅಕ್ಟೋಬರ್ 2) ಬೆಂಗಳೂರು ದೂರದರ್ಶನದ ಮೂಲಕ ಉರ್ದು ವಾರ್ತೆ ಪ್ರಸಾರ ಆರಂಭಸಿದ್ದು ಸರಿಯೇ ಎಂದು ಕನ್ನಡಪರ ಸಂಘಟನೆಗಳು ಪ್ರಶ್ನಿಸಲಾರಂಭಿಸಿದುವು. ಉರ್ದು ಭಾಷಿಕರು ಬೇಡಿಕೆ ಮಂಡಿಸದೆ ಇರುವಾಗ ಉರ್ದು ಭಾಷಾ ಸುದ್ದಿ ಪ್ರಸಾರ ಕ್ರಮ, ಚುನಾವಣಾ ಪೂರ್ವದಲ್ಲಿ ಅಲ್ಪಸಂಖ್ಯಾತರನ್ನು ಒಲೈಸಲು ಕೈಗೊಂಡಿರುವುದು ಎಂಬ ಟೀಕೆ ಕೇಳಿಬಂತು. ಪ್ರಸಾರ ವಿರುದ್ಧ ಚಳವಳಿ ಪ್ರಾರಂಭವಾಗಿ ಉಗ್ರರೂಪ ತಳೆಯಿತು.

ನಂತರದ ಅಹಿತಕರ ಘಟನೆಗಳು ಸ್ವಾಭಾವಿಕ ಮತ್ತು ಅನಿವಾರ್ಯ ಎಂಬಂತಾಯಿತು. ಅಲ್ಲಲ್ಲಿ ಂಸಾಕೃತ್ಯ ನಡೆದು, ಬೆಂಗಳೂರಿನ ಕೆಲವೆಡೆ ರ್ಫ್ಯೂ ವಿಧಿಸಲಾಯಿತು, ಗೋಲಿಬಾರ್ ಹಾಗೂ ರಿತದಿಂದ 25ಕ್ಕೂ ಜಾಸ್ತಿ ಮಂದಿ ಸತ್ತರು. ಾಜಧಾನಿಯ ಜನಜೀವನ ನಾಲ್ಕೈದು ದಿನಗಳ ಾಲ ತಲ್ಲಣಗೊಂಡಿತು. ಇವೆಲ್ಲವುಗಳ ಹಿಂದೆ ಾಜಕೀಯ ಹಿತಾಸಕ್ತಿಗಳ ಕೈವಾಡ ಇತ್ತೆಂದು ಯಾರಾದರೂ ಶಂಕಿಸಲು ಸಾಧ್ಯ.

ಸಾಹಿತ್ಯ–ಸಂಸ್ಕೃತಿಯ ಲೋಕದಲ್ಲಿ ದುಃಖ–ಮ್ಮಾನ, ನಲಿವು– ಸಂತಸದ ಕ್ಷಣಗಳು ಿರ್ಭವಿಸಿದ್ದುವು. ನವೆಂಬರ್ ಮೊದಲವಾರ ಜ್ಯೋತ್ಸವ ಆಚರಣೆಯ ಸಂಭ್ರಮದಲ್ಲಿದ್ದಾಗ

# ಹಿನ್ನೋಟ

ಕನ್ನಡ ಸಾಹಿತ್ಯ ಕ್ಷೇತ್ರದ ದಿಗ್ಗಜವೊಂದು ಉರುಳಿತು. ಕುವೆಂಪು ಕಾವ್ಯನಾಮದಿಂದಲೇ ರಾಷ್ಟ್ರಾದ್ಯಂತ ಸಾಹಿತ್ಯ ಕ್ಷೇತ್ರದಲ್ಲಿ ಪರಿಚಿತರಾದ ಕವಿ ಕೆ.ವಿ. ಪುಟ್ಟಪ್ಪ ಅವರು ಅಸ್ತಂಗತರಾದರು.

## ಅಸ್ತಮಾನ

'ರಾಷ್ಟ್ರಕವಿ'ಯ ಸ್ಥಾನಮಾನ ಹೊಂದಿದ್ದ ಕುವೆಂಪು ಅವರು, ಸಾಹಿತ್ಯದ ಎಲ್ಲ ಪ್ರಕಾರಗಳಲ್ಲಿಯೂ ಕೃತಿರಚನೆ ಮಾಡಿ ಯಶಸ್ಸು ಗಳಿಸಿದರು. 1955 ರಷ್ಟು ಹಿಂದೆಯೇ ಕುವೆಂಪು ಅವರಿಗೆ ಕೇಂದ್ರ ಸಾಹಿತ್ಯ ಅಕಾಡೆಮಿಯ ಪ್ರಶಸ್ತಿ ಬಂದಿತ್ತು. ಕನ್ನಡಕ್ಕೆ ಮೊದಲ ಜ್ಞಾನಪೀಠ ಪ್ರಶಸ್ತಿ ಗಳಿಸಿಕೊಟ್ಟವರು ಅವರು. ಮೊದಲನೆಯ ಪಂಪ ಪ್ರಶಸ್ತಿ, ಮೊದಲ 'ಕರ್ನಾಟಕ ರತ್ನ' ಪ್ರಶಸ್ತಿ ಗಳಿಸಿದ ಕುವೆಂಪು ವಿಶ್ವವಿದ್ಯಾನಿಲಯವೊಂದರ ಕುಲಪತಿಯಾದ ಮೊದಲ ಕನ್ನಡ ಸಾಹಿತಿ. ಅವರ ಹೆಸರಿನಲ್ಲಿ ವಿಶ್ವವಿದ್ಯಾನಿಲಯವನ್ನೇ ಸ್ಥಾಪಿಸಲಾಗಿದೆ. ಮೈಸೂರಿನ ವಾಣಿವಿಲಾಸ ಮೊಹಲ್ಲಾದ 'ಉದಯರವಿ' ಈಗ 'ಕವಿ ಇಲ್ಲದ ಗವಿ.'

ಪ್ರಥಮ ಜ್ಞಾನಪೀಠ ಪ್ರಶಸ್ತಿ ವಿಜೇತ ಕವಿ ಅಸ್ತಂಗತರಾದ ಒಂದು ತಿಂಗಳಲ್ಲೇ, ಕನ್ನಡದ ಸೃಜನಶೀಲ ಬರಹಗಾರ ಡಾ. ಯು.ಆರ್. ಅನಂತಮೂರ್ತಿ ಅವರನ್ನು ಜ್ಞಾನಪೀಠ ಪ್ರಶಸ್ತಿ ಅರಸಿಕೊಂಡು ಬಂದಿತು. ಸಾಹಿತ್ಯ ಕ್ಷೇತ್ರದ ಈ ಪ್ರತಿಷ್ಠಿತ ಪ್ರಶಸ್ತಿ ಗಳಿಸಿದ ಅನಂತಮೂರ್ತಿ ಅವರು ಕನ್ನಡದ ಹೆಸರಾಂತ ಕತೆಗಾರ ಹಾಗೂ ಕಾದಂಬರಿಕಾರ.

ಭಾಷೆ ಹಾಗೂ ಸಂಸ್ಕೃತಿಯ ಬಗ್ಗೆ ಸದಾ ಚಿಂತನೆ, ಸಾಮಾಜಿಕ– ರಾಜಕೀಯ ವಿದ್ಯಮಾನಗಳಿಗೆ ಸದಾ ಸ್ಪಂದನ– ಇದು ಅನಂತಮೂರ್ತಿ ಅವರ ವೈಶಿಷ್ಟ್ಯ. ದೇಶ ವಿದೇಶಗಳ ವಿಶ್ವವಿದ್ಯಾಲಯಗಳ ಸಂದರ್ಶಕ ಪ್ರಾಧ್ಯಾಪಕರಾಗಿದ್ದ ಅವರು, ಕೋಟ್ಟಯಂ ಮಹಾತ್ಮಗಾಂಧಿ ವಿಶ್ವವಿದ್ಯಾನಿಲಯದ ಉಪ ಕುಲಪತಿಯಾಗಿ ಸೇವೆ ಸಲ್ಲಿಸಿದ್ದಾರೆ. ಅನಂತಮೂರ್ತಿ ಅವರಿಗೆ ಬಂದಿರುವ ಜ್ಞಾನಪೀಠ ಪ್ರಶಸ್ತಿ, ಕನ್ನಡ ಸಾಹಿತ್ಯಕ್ಕೆ ಸಂದ ಆರನೇ ಪ್ರಶಸ್ತಿ. ಇತರ ಯಾವ ಭಾಷೆಗೂ ಈ ಗೌರವ ಲಭಿಸಿಲ್ಲ. ಆದುದರಿಂದಲೇ ಪುತಿನ ಅವರು ಹೇಳಿದಂತೆ, ಇದರಿಂದ ಕನ್ನಡಕ್ಕೆ ಕೋಡು ಮೂಡಿದೆ.

ನಾಟಕಕಾರ ಬಿ.ವಿ. ಕಾರಂತ ಅವರಿಗೆ ಪ್ರತಿಷ್ಠಿತ 'ಕಾಳಿದಾಸ್ ಸಮ್ಮಾನ್' ಪುರಸ್ಕಾರವನ್ನು ಘೋಷಿಸಲಾಗಿದೆ. ಮಧ್ಯಪ್ರದೇಶ ಸರ್ಕಾರ ನೀಡುವ ಈ ಪುರಸ್ಕಾರ ರಂಗಭೂಮಿ ಕ್ಷೇತ್ರದಲ್ಲಿ ಪ್ರತಿಷ್ಠಿತವಾದುದು. 1994ರ ವಿಶ್ವಸುಂದರಿ (ಮಿಸ್ ಯೂನಿವರ್ಸ್) ಕಿರೀಟವನ್ನು ಸುಶ್ಮಿತಾ ಸೇನ್ ಅವರು ಧರಿಸಿದ ಕೆಲವೇ ತಿಂಗಳಲ್ಲಿ 'ಲೋಕ ಸುಂದರಿ' (ಮಿಸ್ ವರ್ಲ್ಡ್) ಕಿರೀಟ ಕನ್ನಡದ ಯುವತಿಗೆ ತೊಡಿಸಲಾಯಿತು. ಈ ಕೀರ್ತಿಯನ್ನು ತನ್ನದಾಗಿಸಿಕೊಂಡ ಐಶ್ವರ್ಯಾ ರೈ, ಮುಂಬೈಯಲ್ಲಿ ನೆಲಸಿದ ಮಂಗಳೂರು ಹುಡುಗಿ ಎಂದು ಅಲ್ಲಿಯತನಕ ಅನೇಕರಿಗೆ ಗೊತ್ತಿರಲಿಲ್ಲ.

ಎರಡು ದಶಕಗಳ ಹಿಂದೆ ಭಾರತದ ಕ್ರಿಕೆಟ್ ತಂಡದಲ್ಲಿ ಒಂದು ಹಂತದಲ್ಲಿ ಕರ್ನಾಟಕದ ಐದು ಮಂದಿ ಇದ್ದರು. ಈಗ ಇಬ್ಬರು ಬೌಲರುಗಳು ಭಾರತ ತಂಡ ಜಯಗಳಿಸುವಲ್ಲಿ ಪ್ರಧಾನ ಪಾತ್ರವಹಿಸುತ್ತಿದ್ದಾರೆ. 1994 ರಲ್ಲಿ ಸ್ಪಿನ್ನರ್ ಅನಿಲ್ ಕುಂಬ್ಳೆ ಮತ್ತು ವೇಗದ ಬೌಲರ್ ಜಾವಗಲ್ ಶ್ರೀನಾಥ್ ಅವರು ತಮ್ಮ ಅಪೂರ್ವ ಸಾಧನೆಯಿಂದ ಮೆಚ್ಚುಗೆ ಗಳಿಸಿದ್ದಾರೆ.

ಸಾಹಿತ್ಯ ಕ್ಷೇತ್ರದ ಇನ್ನೂ ಇಬ್ಬರು ಗಣ್ಯರು ನಮ್ಮನ್ನು ಅಗಲಿದ್ದಾರೆ. ಹಿರಿಯ ಸಾಹಿತಿ ಹಾಗೂ ಕನ್ನಡಪರ ಚಿಂತನಕಾರ ಡಾ. ಸಿದ್ಧಯ್ಯ ಪುರಾಣಿಕ್ ಸೆಪ್ಟೆಂಬರ್ ತಿಂಗಳಲ್ಲಿ ನಿಧನರಾದರು. ಉನ್ನತ ಅಧಿಕಾರಿಯಾಗಿದ್ದು ಸೇವೆಯಿಂದ ನಿವೃತ್ತರಾದ ಮೇಲೂ ಅವರು, ಕನ್ನಡ ಪರ ಚಳವಳಿಯಲ್ಲಿ ಸಕ್ರಿಯ ಆಸಕ್ತಿ ವಹಿಸಿದ್ದರು. ಕನ್ನಡದ ಹಿರಿಯ ಸಂಶೋಧಕ ಹಾಗೂ ವಿದ್ವಾಂಸ



ಡಾ. ಎಚ್. ತಿಪ್ಪೇರುದ್ರಸ್ವಾಮಿ ಅವರು ತಮ್ಮ 66ನೇ ವಯಸ್ಸಿನಲ್ಲಿ ನಿಧನರಾದರು.

ವರ್ಷಾಂತ್ಯದ ವೇಳೆಗೆ ನಡೆದ ವಿಧಾನಸಭಾ ಚುನಾವಣೆಯಲ್ಲಿ ಇತರ ಸಣ್ಣಪುಟ್ಟ ಪಕ್ಷಗಳು ಹಾಗೂ ಪಕ್ಷೇತರ ಅಭ್ಯರ್ಥಿಗಳೊಂದಿಗೆ ಜನತಾದಳ, ಕಾಂಗ್ರೆಸ್, ಬಿ.ಜೆ.ಪಿ. ಹಾಗೂ ಕರ್ನಾಟಕ ಕಾಂಗ್ರೆಸ್ ಪಕ್ಷ (ಕೆಸಿಪಿ) ಈ ನಾಲ್ಕು ಪಕ್ಷಗಳು ಸ್ಪರ್ಧಿಸಿದ್ದುವು. 1994ರ ಆರಂಭದಲ್ಲೇ ಮಾಜಿ ಮುಖ್ಯಮಂತ್ರಿ ಎಸ್. ಬಂಗಾರಪ್ಪ ಅವರು ಕರ್ನಾಟಕ ಕಾಂಗ್ರೆಸ್ ಪಕ್ಷ ರಚಿಸಿ, ಚುನಾವಣೆ ಎದುರಿಸಲು ಸಿದ್ಧತೆ ನಡೆಸಿದ್ದರು. ಆದರೆ ಚುನಾವಣೆ ಸಮೀಪಿಸುತ್ತಿದ್ದಂತೆ ದಳ, ಕಾಂಗ್ರೆಸ್, ಬಿಜೆಪಿ ಮಧ್ಯೆ ಪೈಪೋಟಿ ಏರ್ಪಡುವುದು ಖಚಿತವಾಗಿತ್ತು.

'ಇಷ್ಟೇ ಸಂಖ್ಯೆಯ ಸ್ಥಾನ ಗಳಿಸುತ್ತೇವೆ ಎಂದು ಈಗ ಹೇಳಲಾರೆ. ಆದರೆ ಸರ್ಕಾರ ರಚಿಸುವಷ್ಟು ಸ್ಥಾನಗಳನ್ನು ಗೆದ್ದೇ ಗೆಲ್ಲುತ್ತೇವೆ. ಬೇರೆ ಯಾರ ಹಂಗೂ ಇಲ್ಲದೆ ನಾವು ಅಧಿಕಾರಕ್ಕೆ ಬರುತ್ತೇವೆ' ಎಂದು ಅಕ್ಟೋಬರ್ 16 ರಂದು ಬೆಂಗಳೂರು ಪ್ರೆಸ್ ಕ್ಲಬ್‌ನಲ್ಲಿ ಜನತಾದಳ ನಾಯಕ ಎಚ್.ಡಿ. ದೇವೇಗೌಡ ಅವರು ಹೇಳಿದ್ದರು. ಸರ್ಕಾರ ರಚಿಸುವಷ್ಟು ಬಹುಮತ (116) ಪಡೆದು ಜನತಾದಳ ಅಧಿಕಾರಕ್ಕೆ ಬಂದಿದೆ. ಡಿಸೆಂಬರ್ 11 ರಂದು ಮುಖ್ಯಮಂತ್ರಿಯಾಗಿ ದೇವೇಗೌಡ ಅಧಿಕಾರ ಸ್ವೀಕರಿಸಿದ್ದಾರೆ.

ಸೆಪ್ಟೆಂಬರ್ 6 ರಂದು ನಡೆದ ಶಾಸಕರ ದಿನಾಚರಣೆಯ ಕ್ರಿಕೆಟ್ ಪಂದ್ಯವನ್ನು ಇಲ್ಲಿ ಪ್ರಸ್ತಾಪಿಸುವುದು ಅಪ್ರಸ್ತುತ ಆಗಲಾರದು. ಅಂದು ಶಾಸಕರ ತಂಡದ ನಾಯಕ ವೀರಪ್ಪಮೊಯಿಲಿ ಅವರು 12 ರನ್ ಮಾಡಿ ಔಟಾಗದೆ ಉಳಿದಿದ್ದರು. ಆದರೆ ಶಾಸಕರ ತಂಡ ಪರಾಭವಗೊಂಡಿತ್ತು. ನಂತರ ಚುನಾವಣೆಯಲ್ಲಿಯೂ ಮೊಯಿಲಿ ಔಟಾಗದೆ ಉಳಿದಿದ್ದಾರೆ. ಆದರೆ ಅವರ ತಂಡ (ಕಾಂಗ್ರೆಸ್) ಪರಾಭವಗೊಂಡಿದೆ. ಇದು ಕೇವಲ ಕಾಕತಾಳೀಯ. ✤